ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 702
ಸದಸ್ಯರ ಹೆಸರು : ಶ್ರೀ ದಿನೇಶ್ ಗೂಳಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 22/02/2022
ಉತ್ತರಿಸುವ ಸಚಿವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಿವೆ? (ತಾಲ್ಲೂಕುವಾರು ವಿವರ ನೀಡುವುದು)	ಮಂಡ್ಯ ಜಿಲ್ಲೆಯಲ್ಲಿ ಒಟ್ಟು 2546 ಅಂಗನವಾಡಿ ಕೇಂದ್ರಗಳಿವೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ. (ಕೆಳಗಿನ ಕೋಷ್ಟಕ)

ಕ್ರ ಸಂ.	ತಾಲ್ಲೂಕು	ಅಂ.ಕೇಂದ್ರಗಳ ಸಂಖ್ಯೆ
1	ಶ್ರೀರಂಗಪಟ್ಟಣ	221
2	ಪಾಂಡವಪುರ	266
3	ನಾಗಮಂಗಲ	366
4	ಮಳವಳ್ಳಿ	381
5	ಮದ್ದೂರು	408
6	ಮಂಡ್ಯ	506
7	ಕೆ.ಆರ್.ಪೇಟೆ	398
	ಒಟ್ಟು	**2546**

ಕ್ರ ಸಂ.	ಪ್ರಶ್ನೆ	ಉತ್ತರ
ಆ.	ಅಂಗನವಾಡಿ ಮಕ್ಕಳಿಗೆ ಪ್ರತಿನಿತ್ಯ ಯಾವ ಆಹಾರ ಮತ್ತು ತಿಂಡಿಗಳನ್ನು ನೀಡಲಾಗುತ್ತಿದೆ:	ಮಂಡ್ಯ ಜಿಲ್ಲೆಯ ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ವಿತರಿಸುತ್ತಿರುವ ಆಹಾರ ಪದಾರ್ಥಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.
ಇ.	ಅಂಗನವಾಡಿ ಕೇಂದ್ರಗಳಿಗೆ ನೀಡಲಾಗುತ್ತಿರುವ ಬೇಳೆಕಾಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು:	ಅಂಗನವಾಡಿ ಕೇಂದ್ರಗಳಿಗೆ ನೀಡಲಾಗುತ್ತಿರುವ ಬೇಳೆ ಕಾಳುಗಳು ಕಳಪೆ ಗುಣಮಟ್ಟದಿಂದ ಕೂಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಈ.	ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ವಿತರಿಸುತ್ತಿರುವ ಗುತ್ತಿಗೆದಾರರು ಯಾರು ? (ತಾಲ್ಲೂಕುವಾರು ವಿವರ ನೀಡುವುದು.)	ಮಂಡ್ಯ ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಅಗತ್ಯವಿರುವ ಪೂರಕ ಪೌಷ್ಟಿಕ ಆಹಾರವನ್ನು ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳು ಸರಬರಾಜು ಮಾಡುತ್ತಿವೆ.

		ವಿವರ ಈ ಕೆಳಗಿನಂತಿದೆ.

ಕ್ರ ಸಂ.	ತಾಲ್ಲೂಕು / ಯೋಜನೆ	ಮಂಡ್ಯ ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ವಿತರಿಸುತ್ತಿರುವ ಎಂ.ಎಸ್.ಪಿ.ಟಿ.ಸಿ. ಗಳ ವಿವರ
1	ಮದ್ದೂರು	ಮದ್ದೂರು ಮತ್ತು ನಾಗಮಂಗಲ ಎಂ.ಎಸ್.ಪಿ.ಟಿ.ಸಿ., ಚಾಮನಹಳ್ಳಿ, ಮದ್ದೂರು ತಾಲ್ಲೂಕು.
	ನಾಗಮಂಗಲ	
2	ಪಾಂಡವಪುರ	ಪಾಂಡವಪುರ ಮತ್ತು ಕೆ.ಆರ್.ಪೇಟೆ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ., ಪಾಂಡವಪುರ ತಾಲ್ಲೂಕು
	ಕೆ.ಆರ್.ಪೇಟೆ	
3	ಮಳವಳ್ಳಿ	ಮಳವಳ್ಳಿ ಮತ್ತು ಶ್ರೀರಂಗಪಟ್ಟಣ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ., ಮಳವಳ್ಳಿ ತಾಲ್ಲೂಕು.
	ಶ್ರೀರಂಗಪಟ್ಟಣ	
4	ಮಂಡ್ಯ	ಮಂಡ್ಯ ಮತ್ತು ದುದ್ದ ಯೋಜನೆ ಎಂ.ಎಸ್.ಪಿ.ಟಿ.ಸಿ., ಹಳೇಬೂದನೂರು, ಮಂಡ್ಯ ತಾಲ್ಲೂಕು.
	ದುದ್ದ	

ಸಂಖ್ಯೆ: ಮಮಇ 47 ಐಸಿಡಿ 2022

Halappa BA

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 702 ಕ್ಕೆ ಒದಗಿಸಲಾದ ಅನುಬಂಧ

** ** **

ಮಂಡ್ಯ ಜಿಲ್ಲೆಯ ಅಂಗನವಾಡಿ ಕೇಂದ್ರದಲ್ಲಿನ 6 ತಿಂಗಳಿಂದ 3 ವರ್ಷದ ಮಕ್ಕಳಿಗೆ ಒಂದು ತಿಂಗಳಿಗೆ ಮನೆಗೆ ವಿತರಿಸುವ ಪೂರಕ ಪೌಷ್ಠಿಕ ಆಹಾರದ ವಿವರ.

ಕ್ರ. ಸಂ.	ಆಹಾರ ಪದಾರ್ಥಗಳು	ಒಟ್ಟು ಪ್ರಮಾಣ (ಗ್ರಾಂ. ಗಳಲ್ಲಿ)
1	ಹಾಲು	375 ಗ್ರಾಂ.
2	ಸಕ್ಕರೆ	250 ಗ್ರಾಂ.
3	ಪುಷ್ಠಿ ನ್ಯೂಟ್ರಿಮಿಕ್ಸ್	4 ಕೆ.ಜಿ.

ಮಂಡ್ಯ ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ 3 ವರ್ಷದಿಂದ 6 ವರ್ಷದ ಮಕ್ಕಳಿಗೆ ಕೇಂದ್ರದಲ್ಲಿ ವಿತರಿಸುತ್ತಿರುವ ಪೂರಕ ಪೌಷ್ಠಿಕ ಆಹಾರದ ವಿವರ.

ಕ್ರ. ಸಂ.	ಆಹಾರ ಪದಾರ್ಥಗಳು	ಊಟ / ತಿಂಡಿಯ ವಿವರ	ಪ್ರಮಾಣ ಗ್ರಾಂ. ಗಳಲ್ಲಿ (ಪ್ರತಿ ದಿನಕ್ಕೆ / ಪ್ರತಿ ಫಲಾನುಭವಿಗೆ)
1	ಕಡ್ಲೆಕಾಯಿ ಬೀಜ	ಬೆಳಗಿನ ತಿಂಡಿ ಚಿಕ್ಕಿ	15
2	ಬೆಲ್ಲ		10
3	ಅಕ್ಕಿ	ಮಧ್ಯಾಹ್ನದ ಉಪಹಾರ ಅನ್ನ, ಸಾಂಬಾರ್	120
4	ತೊಗರಿಬೇಳೆ		30
5	ಹೆಸರುಕಾಳು		30
6	ಸಾಂಬಾರು ಪುಡಿ		02
7	ಎಣ್ಣೆ		02
8	ಉಪ್ಪು		01
9	ತರಕಾರಿ		0.75
10	ಮೊಟ್ಟೆ	–	01 (ವಾರಕ್ಕೆ 2 ದಿನ)
11	ಹಾಲಿನ ಪುಡಿ	–	150 ಎಂ.ಎಲ್. (ವಾರಕ್ಕೆ 5 ದಿನ)
12	ಸಕ್ಕರೆ	–	10

ವಾರದಲ್ಲಿ 3 ದಿನ ಹೆಸರುಕಾಳು ತರಕಾರಿ ಮಿಶ್ರಿತ ಅನ್ನಸಾಂಬಾರ್ ಮತ್ತು 3 ದಿನ ತೊಗರಿಬೇಳೆ ತರಕಾರಿ ಮಿಶ್ರಿತ ಅನ್ನಸಾಂಬಾರ್ ವಿತರಿಸಲಾಗುತ್ತಿದೆ.